## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1037
ಸದಸ್ಯರ ಹೆಸರು : ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 18.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಒಬ್ಬ ರೈತನ ಹಿಡುವಳಿ ಜಮೀನಿನಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಕಲ್ಲು, ಬಂಡೆ, ಹಳ್ಳ ತಗ್ಗಿದ ಪ್ರದೇಶ, ಮರಡಿ ಇತ್ಯಾದಿ ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿದ ಸ್ವತ್ತೇ ಅಥವಾ ಹಿಡುವಳಿದಾರರಿಗೆ ಸೇರಿದ ಸ್ವತ್ತೇ ಎಂಬುದರ ಬಗ್ಗೆ ಸರ್ಕಾರದ ಆದೇಶ/ಅಧಿಸೂಚನೆ/ಸುತ್ತೋಲೆ ಹೊರಡಿಸಿದೆಯೇ: (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ಕಂಇ 05 ಎಲ್‌ಜಿಪಿ 2018 ದಿನಾಂಕ;16.05.2018 ರನ್ವಯ ಫುಟ್ ಖರಾಬು 'ಎ' ಜಮೀನುಗಳು ಸರ್ಕಾರಕ್ಕೆ ಸೇರಿದವುಗಳೇ ಅಥವಾ ಹಿಡುವಳಿದಾರರಿಗೆ ಸೇರಿದವುಗಳೇ ಎಂಬುದರ ಬಗ್ಗೆ ರುಜುವಾತುಪಡಿಸುವ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ "ಫುಟ್ ಖರಾಬು-ಎ ಜಮೀನುಗಳ ನಿರ್ಧರಣಾ ಸಮಿತಿ" ಯನ್ನು ರಚಿಸಲಾಗಿದೆ. |
| ಆ) | ಇಂತಹ ಜಮೀನುಗಳನ್ನು ರುಜುವಾತು ಪಡಿಸುವ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಖರಾಬು ಜಮೀನುಗಳ ನಿರ್ಧರಣಾ ಸಮಿತಿಯನ್ನು ರಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | |
| ಇ) | ಬಂದಿದ್ದಲ್ಲಿ, ಈ ನಿರ್ಧರಣಾ ಸಮಿತಿಗಳು ಇಲ್ಲಿಯವರಗೆ ಎಷ್ಟು ಸಭೆಗಳನ್ನು ನಡೆಸಿ, ಪರಿಶೀಲನಾ ವರದಿಗಳನ್ನು ಸಲ್ಲಿಸಿದೆಯೇ (ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸುವುದು) | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ) | ನಿರ್ಧರಣಾ ಸಮಿತಿಯ ಅಭಿಪ್ರಾಯಗಳನ್ನು ಆದರಿಸಿ ಸಂಬಂಧಪಟ್ಟ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸತಕ್ಕದ್ದು ಎಂದು ಸರ್ಕಾರದ ದಿನಾಂಕ:16.05.2018ರ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಿದೆಯೇ; ತಿಳಿಸಿದ್ದಲ್ಲಿ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಇಲ್ಲಿಯವರಗೆ ಎಷ್ಟು ಪ್ರಕರಣಗಳಲ್ಲಿ ಆದೇಶವನ್ನು ಹೊರಡಿಸಿದ್ದಾರೆ: (ಜಿಲ್ಲಾವಾರು ಮಾಹಿತಿ ಒದಗಿಸುವುದು) | |
| ಉ) | ಸರ್ಕಾರದ ಆದೇಶ ಸಂಖ್ಯೆಯ ಆರ್‌ಡಿ 05 ಎಲ್‌ಜಿಇ 2018 ದಿನಾಂಕ:16.05.2018 ರ ಆದೇಶ ಇನ್ನೂ ಜಾರಿಯಲ್ಲಿದೆಯೇ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆಯ ಆರ್‌ಡಿ 05 ಎಲ್‌ಜಿಪಿ 2018 ದಿನಾಂಕ:16.05.2018ರ ಆದೇಶವು ಜಾರಿಯಲ್ಲಿರುತ್ತದೆ. |

ಸಂಖ್ಯೆ: ಆರ್‌ಡಿ 142 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ

| ಕ್ರ.ಸಂ. | ಜಿಲ್ಲೆಯ ಹೆಸರು | ನಿರ್ಧರಣಾ ಸಮಿತಿಯ ಒಟ್ಟು ಸಭೆಗಳ ಸಂಖ್ಯೆ | ಒಟ್ಟು ಆದೇಶಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ನಗರ | 34 | 34 |
| 2 | ಬೆಂಗಳೂರು ಗ್ರಾಮಾಂತರ | 05 | 15 |
| 3 | ಬೆಳಗಾವಿ | 10 | 398 |
| 4 | ಬಳ್ಳಾರಿ | 0 | 0 |
| 5 | ಬಾಗಲಕೋಟೆ | 11 | 11 |
| 6 | ಬೀದರ | 0 | 0 |
| 7 | ಚಾಮರಾಜನಗರ | 0 | 0 |
| 8 | ಚಿಕ್ಕಬಳ್ಳಾಪುರ | 07 | 08 |
| 9 | ಚಿಕ್ಕಮಗಳೂರು | 3 | 6 |
| 10 | ಚಿತ್ರದುರ್ಗ | 0 | 0 |
| 11 | ದಕ್ಷಿಣ ಕನ್ನಡ | 0 | 0 |
| 12 | ದಾವಣಗೆರೆ | 0 | 0 |
| 13 | ಧಾರವಾಡ | 02 | 02 |
| 14 | ಗದಗ | 06 | 05 |
| 15 | ಹಾಸನ | 29 | 613 |
| 16 | ಹಾವೇರಿ | 07 | 07 |
| 17 | ಕಲಬುರಗಿ | 1 | 1 |
| 18 | ಕೊಡಗು | 3 | 13 |
| 19 | ಕೊಪ್ಪಳ | 0 | 0 |
| 20 | ಕೋಲಾರ | 04 | 04 |
| 21 | ಮಂಡ್ಯ | 02 | 05 |
| 22 | ಮೈಸೂರು | 14 | 111 |
| 23 | ರಾಮನಗರ | 05 | 29 |
| 24 | ರಾಯಚೂರು | 0 | 0 |
| 25 | ಶಿವಮೊಗ್ಗ | 09 | 09 |
| 26 | ತುಮಕೂರು | 14 | 14 |
| 27 | ಉಡುಪಿ | 0 | 0 |
| 28 | ಉತ್ತರ ಕನ್ನಡ | 04 | 14 |
| 29 | ವಿಜಯನಗರ | 0 | 0 |
| 30 | ವಿಜಯಪುರ | 45 | 609 |
| 31 | ಯಾದಗಿರಿ | 0 | 0 |
| | **ಒಟ್ಟು** | **215** | **1908** |